# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103

ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ:ತುವಿ:ಖ.ಕೋ:80:2024-25/2369

ದಿನಾಂಕ:19.11.2024.

## ದರಪಟ್ಟಿ ಆಹ್ವಾನ

ವಿಷಯ: ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ನಾತಕೋತ್ತರ ಪುರುಷ ಮತ್ತು ಮಹಿಳೆ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ತರಕಾರಿ ಹಾಗೂ ಇತರೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ದರಪಟ್ಟಿ" ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿ ನಿಲಯ ಇವರ ಪತ್ರದ ದಿನಾಂಕ: 29.08.2024

2. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳಾ ವಿದ್ಯಾರ್ಥಿ ನಿಲಯ ಇವರ ಪತ್ರದ ದಿನಾಂಕ: 03.10.2024

3. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/9035 ದಿನಾಂಕ: 09.09.2022.

4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.11.2024

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1&2)ರ ಬೇಡಿಕೆಯನುಸಾರ ಉಲ್ಲೇಖ(3)ರ ಆದೇಶದ ಮೇರೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ತಿದ್ದುಪಡಿ 4(i)(ii) ರ ನಿಯಮದನ್ವಯ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ತರಕಾರಿ ಹಾಗೂ ಇತರೆ ಆಹಾರ ಪದಾರ್ಥಗಳನ್ನು ಸರಬರಾಜು ಪಡೆಯಲು ಉಲ್ಲೇಖ (4)ರ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳೊಳಪಟ್ಟು ಅಂಗೀಕೃತ ನೋಂದಾಯಿತ ಆಸಕ್ತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಆಹಾರ ಪದಾರ್ಥಗಳ ವಿವರ:

| ಕ್ರ ಸಂ. | ತರಕಾರಿಗಳು | ಪ್ರಮಾಣ | ಕ್ರ ಸಂ. | ತರಕಾರಿಗಳು | ಪ್ರಮಾಣ |
|---|---|---|---|---|---|
| 1 | ನಿಂಬೆಹಣ್ಣು | 1 ಒಂದಕ್ಕೆ | 24 | ದಂಟಿನ ಸೊಪ್ಪು | 1 ಕೆ.ಜಿ. |
| 2 | ಉರಳಿಕಾಯಿ | 1 ಕೆ.ಜಿ. | 25 | ಪುದೀನ ಸೊಪ್ಪು | 1 ಕೆ.ಜಿ. |
| 3 | ಕ್ಯಾರೆಟ್ | 1 ಕೆ.ಜಿ. | 26 | ಬಜ್ಜಿ ಮೆಣಸಿನಕಾಯಿ | 1 ಕೆ.ಜಿ. |
| 4 | ಗೆಡ್ಡೆಕೋಸು/ನವಿಲು ಕೋಸು | 1 ಕೆ.ಜಿ. | 27 | ಬೀಟ್‌ರೋಟ್ | 1 ಕೆ.ಜಿ. |
| 5 | ಎಲೆಕೋಸು | 1 ಕೆ.ಜಿ. | 28 | ಸೀಮೆ ಬದನೆಕಾಯಿ | 1 ಕೆ.ಜಿ. |
| 6 | ಬದನೆಕಾಯಿ (2 ತರಹ) | 1 ಕೆ.ಜಿ. | 29 | ಬೆಂಡೆಕಾಯಿ | 1 ಕೆ.ಜಿ. |
| 7 | ಈರೇಕಾಯಿ | 1 ಕೆ.ಜಿ. | 30 | ಆಲೂಗಡ್ಡೆ | 1 ಕೆ.ಜಿ. |
| 8 | ತೊಂಡೆಕಾಯಿ | 1 ಕೆ.ಜಿ. | 31 | ಬೆಳ್ಳುಳ್ಳಿ | 1 ಕೆ.ಜಿ. |
| 9 | ಹೂ ಕೋಸು | 1 ಕೆ.ಜಿ. | 32 | ಈರುಳ್ಳಿ | 1 ಕೆ.ಜಿ. |
| 10 | ಟೊಮ್ಯಾಟೋ | 1 ಕೆ.ಜಿ. | 33 | ಕ್ಯಾಪ್ಸಿಕಂ | 1 ಕೆ.ಜಿ. |
| 11 | ಸಾಂಬರ್ ಸೌತೆಕಾಯಿ | 1 ಕೆ.ಜಿ. | 34 | ತೆಂಗಿನಕಾಯಿ | 1 ಕೆ.ಜಿ. |
| 12 | ನುಗ್ಗೆ ಕಾಯಿ | 1 ಕೆ.ಜಿ. | 35 | ಸಬಾಕ್ಸಿ ಸೊಪ್ಪು | 1 ಕೆ.ಜಿ. |
| 13 | ಮೂಲಂಗಿ | 1 ಕೆ.ಜಿ. | 36 | ಬಾಳೆಹಣ್ಣು (ಪಚ್ಬಾಳೆ) | 1 ಕೆ.ಜಿ. |
| 14 | ಸೌತೆಕಾಯಿ | 1 ಕೆ.ಜಿ. | 37 | ಕೋಳಿ ಮೊಟ್ಟೆ | 1 ಒಂದಕ್ಕೆ |
| 15 | ಹಸಿ ಮೆಣಸಿನಕಾಯಿ | 1 ಕೆ.ಜಿ. | 38 | ರೆಡಿ ಚಿಕನ್ | 1 ಕೆ.ಜಿ. |
| 16 | ಪಡವಲಕಾಯಿ | 1 ಕೆ.ಜಿ. | 39 | ಗೋರಿಕಾಯಿ | 1 ಕೆ.ಜಿ. |
| 17 | ಸೋರೇಕಾಯಿ | 1 ಕೆ.ಜಿ. | 40 | ಯಳ್ಳಿಕಾಯಿ | 1 ಕೆ.ಜಿ. |
| 18 | ಕುಂಬಳಕಾಯಿ (2 ತರಹ) | 1 ಕೆ.ಜಿ. | 41 | ಮಾವಿನಕಾಯಿ | 1 ಕೆ.ಜಿ. |
| 19 | ಹಸಿ ಶುಂಠಿ | 1 ಕೆ.ಜಿ. | 42 | ಅವರೇಕಾಯಿ | 1 ಕೆ.ಜಿ. |
| 20 | ಕೊತ್ತಂಬರಿ ಸೊಪ್ಪು | 1 ಕೆ.ಜಿ. | 43 | ತೊಗರಿಕಾಯಿ | 1 ಕೆ.ಜಿ. |
| 21 | ಪಾಲಕ್ ಸೊಪ್ಪು | 1 ಕೆ.ಜಿ. | 44 | ಆಗಲಕಾಯಿ | 1 ಕೆ.ಜಿ. |
| 22 | ಕರಿಬೇವಿನ ಸೊಪ್ಪು | 1 ಕೆ.ಜಿ. | 45 | ಹಸಿಬಟಾಣಿ | 1 ಕೆ.ಜಿ. |
| 23 | ಮೆಂತ್ಯ ಸೊಪ್ಪು | 1 ಕೆ.ಜಿ. | | | |

(ಪು.ತಿ.ನೋ)

ಷರತ್ತು ಮತ್ತು ನಿಬಂಧನೆಗಳು:

1. ಲಕೋಟೆಯ ಮೇಲೆ ವಿಶ್ವವಿದ್ಯಾನಿಲಯದ **"ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ಮತ್ತು ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಿರುವ ತರಕಾರಿ ಹಾಗೂ ಇತರೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ದರಪಟ್ಟಿ"** ಎಂದು ನಮೂದಿಸತಕ್ಕದ್ದು.
2. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
3. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು/ಬೆಳೆಗಾರರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
4. **ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 28.11.2024 ಅಪರಾಹ್ನ 3.30.**
5. ದರಪಟ್ಟಿಗಳನ್ನು **ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572 103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
6. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
7. ತಮ್ಮ ದರಪಟ್ಟಿಯಲ್ಲಿ ಪ್ರತಿ ಸಾಮಗ್ರಿವಾರು ದರಗಳನ್ನು ನಮೂದಿಸುವುದು. (ಎಲ್ಲಾ ತೆರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)
8. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
9. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
10. **ಹೆಚ್ಚಿನ ವಿವರಗಳು ಅಥವಾ ಮಾಹಿತಿಯ ಅಗತ್ಯವಿದ್ದಲ್ಲಿ ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳು, ತು.ವಿ.ತು ಇವರನ್ನು ಸಂಪರ್ಕಿಸಬಹುದು.**

**ಆದೇಶದ ಮೇರೆಗೆ**

ಉಪಕುಲಸಚಿವರು
ಉಪಕುಲಸಚಿವರು
**ಖರೀದಿ ಕೋಶ**
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿ ನಿಲಯ, ತು.ವಿ.ತು.
5. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳಾ ವಿದ್ಯಾರ್ಥಿ ನಿಲಯ, ತು.ವಿ.ತು.
6. ರಕ್ಷಣಾ ಪ್ರತಿ.